**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,**

**ಟಿ.ನರಸೀಪುರ**

**ದಿನಾಂಕ 30 ನೇ ಅಕ್ಟೋಬರ್ 2025**

**ಸಿಸಿ ಸಂಖ್ಯೆ: 1929/2022**

ಫಿರ್ಯಾದಿಃ : ರಾಜ್ಯದ ಪರವಾಗಿ ಟಿ.ನರಸೀಪುರ ವಲಯ ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ಸ್ವಾಮಿ,
ಬಿನ್ ಶಿವಣ್ಣ,
ವಯಸ್ಸು 31 ವರ್ಷ,
ವಾಸಃ ಎಂ.ಎಂ.ರಸ್ತೆ, ಬನ್ನೂರು ಟೌನ್, ತಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

2. ಎಂ.ರಮೇಶ್,
ಬಿನ್ ಕೆ.ಹೆಚ್.ಮುದ್ದಯ್ಯ. (Split up)

**ದೋಷಾರೋಪಣೆ**

ಶ್ರೀಮತಿ ಎನ್.ನಿವೇದಿತಾ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.

ಮೊದಲನೆಯದಾಗಿ ದಿಃ 15/12/2020 ರಂದು ಬೆಳಿಗ್ಗೆ 11.50 ಗಂಟೆ ಸಮಯದಲ್ಲಿ ತಿ.ನರಸೀಪುರ ವಲಯ ಪೊಲೀಸ್ ಠಾಣಾ ಸರಹದ್ದು, ತಿ.ನರಸೀಪುರ-ಬನ್ನೂರು ಮುಖ್ಯ ರಸ್ತೆಯ ಮಲಿಯೂರು ಗ್ರಾಮದ ಕಡೆಗೆ ಹೋಗುವ ಕಾಲುವೆಯ ಕೂಡು ರಸ್ತೆಯಲ್ಲಿ, ಚಾಸಾ.6 ರವರು ಸಿಬ್ಬಂದಿಗಳೊಂದಿಗೆ ರಸ್ತೆಗಾವಲು ನಡೆಸುತ್ತಿದ್ದಾಗ, ಆರೋಪಿಯಾದ ನೀವು ಹೀರೋ ಹೋಂಡಾ ಸಿಡಿ-100 ಸಂ.ಕೆಎ-02-ಇಎ-5350 ರ ದ್ವಿಚಕ್ರ ವಾಹನದ

ಮುಂಭಾಗದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ, ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಎಂದು ನಮೂದಾಗಿರುವ 2 ರಟ್ಟಿನ ಪಟ್ಟಿಗೆ ಇದ್ದು, ಹಾಗೂ ಓಲ್ಡ್ ಅಡ್ಮಿರಲ್ ಬ್ರಾಂಡಿ ಎಂದು ನಮೂದಾಗಿರುವ 1 ರಟ್ಟಿನ ಪಟ್ಟಿಗೆ ಇದ್ದು, ಹಾಗೂ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ಎಂದು ನಮೂದಾಗಿರುವ 1 ರಟ್ಟಿನ ಪಟ್ಟಿಗೆ ಇದ್ದು, ಅದನ್ನು ತೆಗೆದು ಎಣಿಸಲಾಗಿ, ರಟ್ಟಿನ ಪೆಟ್ಟಿಗೆಯಲ್ಲಿ, 90 ಮಿಲಿಯ 192 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕ್‌ಗಳು, ಹಾಗೂ 180 ಮಿಲಿಯ 48 ಓಲ್ಡ್ ಅಡ್ಮಿರಲ್ ಬ್ರಾಂಡಿಯ ಮದ್ಯದ ಟೆಟ್ರಾ ಪ್ಯಾಕ್‌ಗಳು, ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ತುಂಬಿದ 24 ಟಿನ್ ಗಳಿದ್ದು, ಒಟ್ಟು 25.920 ಲೀಟರ್ ಮದ್ಯ ಹಾಗೂ 7.920 ಲೀಟರ್ ಬಿಯರ್ ಅನ್ನು, ಯಾವುದೇ ರಹದಾರಿ ಇಲ್ಲದೆ ಅಕ್ರಮವಾಗಿ ಹೊಂದಿ ದ್ವಿಚಕ್ರ ವಾಹನದಲ್ಲಿ ಸಾಗಾಣಿಕೆ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32(1), 38(A) ಮತ್ತು 43 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಪ್ರಶ್ನೆಃ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

(ಈ ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**